ಎಚ್‌ಆರ್ ಫಾರ್ಮಾಲಿಟಿಗಳ ಬಗ್ಗೆ ತಿಳಿಸಿದ. **"We are a much bigger company now.. the stakes are higher"** ಎಂದು ಹೇಳಿ ಆಗಷ್ಟೆ ಪ್ರಮೋಷನ್ ಪಡೆದು ಎಲ್ಲರ ಮೆಚ್ಚಿಗೆ ಗಳಿಸಿದ್ದ ಸಂಜೀವನನ್ನು ಹೊಗಳಿದ.

ಸಂಜೆ ಟೌನ್‌ಹಾಲ್ ಹತ್ತಿರವಿದ್ದ ಆರ್ಟ್ ಗ್ಯಾಲೆರಿಯಲ್ಲಿ ನಡೆಯುತ್ತಿದ್ದ ಪೈಂಟಿಗ್ ಎಕ್ಸಿಬಿಷನ್ ನೋಡಿ ಹೊರಬಂದಾಗ ಮಳೆ ಸುರಿಯುತ್ತಿತ್ತು. ಎದುರಿದ್ದ ಕೆಫೆಯಲ್ಲಿ ಕೂತು ಮಳೆ ನಿಲ್ಲಲೆಂದು ಕಾಯುತ್ತಿದ್ದೆ. ಎಕ್ಸಿಬಿಷನ್ ನೋಡಿ ಮ್ಯೂಸಿಯಮ್‌ನಿಂದ ಜನರು ಹೊರಬೀಳುತ್ತಿದ್ದರು. ಮಳೆಯಿಂದ ತೊಯ್ದ ರಸ್ತೆ ಮ್ಯೂಸಿಯಮ್ಮಿನ ಲೈಟುಗಳ ಪ್ರತಿಬಿಂಬದಿಂದ ಹೊಳೆಯುತ್ತಿತ್ತು. ಈ ಮೋಹಕ ದೃಶ್ಯವನ್ನು ಸೆರೆಹಿಡಿಯಲು ಕ್ಯಾಮೆರಾ ತೆಗೆದು ಫೋಕಸ್ ಮಾಡುತ್ತಿರುವಾಗ ಸಾಲಾಗಿ ರೈಲು ಸ್ಟೇಷನ್ನಿನ ದಾರಿ ಹಿಡಿಯುತ್ತಿದ್ದ ಜನರ ಗುಂಪಿನಿಂದ ಬೇರೆಯಾಗಿ ಒಬ್ಬ ಬಳುಕು ನಡಿಗೆಯಲ್ಲಿ ಪಕ್ಕದಲ್ಲಿದ್ದ ಜಾಕರಾಂಡಾ ಮರದ ಕೆಳಗೆ ಕುಸಿದು ಕುಳಿತುಬಿಟ್ಟ. ನನ್ನ ಊಹೆ ಖಚಿತವಾಗುತ್ತಿದ್ದಂತೆ ಕ್ಯಾಮೆರಾ ಬದಿಗಿಟ್ಟು ನೋಡಿದೆ. ಸಿಡಿಜಿ! ಜೀವಂತಿಕೆಯ ಸೆಲೆಯಾಗಿದ್ದ ನನ್ನ ಸೂಪರ್ ಹೀರೊ ಚಾರ್ಲೀ ಡೆಲ್‌ಗ್ರಾಂಡ್. ಇಲ್ಲಿ ರಾಶಿರಾಶಿಯಾಗಿ ಸುರಿದ್ದಿದ್ದ ನೀಲಿ ಜಾಕರಾಂಡಾ ಹೂವುಗಳ ಮಡುವಿನಲ್ಲಿ ಒಬ್ಬನೇ ಕೂತಿದ್ದ.

ಫೇಸ್‌ಬುಕ್ ತೆಗೆದು ನೋಡುತ್ತಿದ್ದಾಗ ಅನಾಮಿಕರ ಫೋಟೊಗಳ ನಡುವೆ ಸಾರಾ ಎದುರಾಗಿಬಿಟ್ಟಳು. ಕಾರಣ, ಸುಳಿವು, ಸಮಜಾಯಿಷಿಗಳಾವುದನ್ನು ಕೊಡದೆ ದೂರವಾಗಿ ನನ್ನಿಂದ ನಿರ್ಲಿಪ್ತ ಅಂತರವನ್ನು ಕಾಪಾಡಿಕೊಂಡಿದ್ದ ಸಾರಾ ತನ್ನ ನಾಯಿಯನ್ನು ಅಪ್ಪಿಕೊಂಡು ತೆಗೆದ ಸೆಲ್ಫೀ ಹಾಕಿದ್ದಳು. ಕೆನ್ನೆಯಿಂದ ಕತ್ತಿನವರೆರೂ ಇದ್ದ ಉಗುರಿನ ಗುರುತು ಮತ್ತು ರಕ್ತದ ಕಲೆಗಳಿಂದ ಅವಳು ಭಯಾನಕವಾಗಿ ಕಂಡಳು. ನಾನು ಮುದ್ದಿಸಿದ ಅದೇ ಮುಖ, ಚುಂಬಿಸಿದ ಅದೇ ತುಟಿಗಳನ್ನು ಅವಳ ಮುದ್ದಿನ ನಾಯಿ ಪರಚಿ, ರಕ್ತ ಸುರಿಸಿತ್ತು. ಅವಳು ತನ್ನ ಮನಸ್ಸು ತುಂಬುವವರೆಗೂ ನಾಯಿಗೆ ತನ್ನ ಮುಖವನ್ನು ಬಿಟ್ಟುಕೊಟ್ಟು, ತನ್ನೊಳಗೆ ಕುದಿಯುತ್ತಿದ್ದ ಏಕಾಕಿತನವನ್ನು ಅತ್ಯಂತ ಸಹಜವಾಗಿ ತೋರಿಸಿದ್ದಳು.

ರಾತ್ರಿ ರೂಮಿಗೆ ಬಂದಾಗ ಮೊಬೈಲ್ ಕುಯ್ಗುಟ್ಟಿತು. **"Welcome back to the island.. see you tomorrow"** ಎಂದು ಸಂಜೀವ್ ವಾಟ್ಸ್‌ಆ್ಯಪ್ ಮೆಸೇಜ್ ಕಳಿಸಿದ್ದ. ಕಾಂಗರೂ ಮರಿಯೊಂದರ ಬಾಯಿಗೆ ದೂರದಿಂದಲೇ ಕೈಚಾಚಿ ಕ್ಯಾರೆಟ್ ತಿನ್ನಿಸುತ್ತಾ ಹಲ್ಲುಕಿರಿಯುತ್ತಿದ್ದ ಅವನ ವಾಟ್ಸ್‌ಆ್ಯಪ್ ಡಿಸ್‌ಪ್ಲೇ ಫೋಟೊನೊಮ್ಮೆ ನೋಡಿ ಹಾಸಿಗೆಯಲ್ಲಿ ಕುಸಿದೆ.


## ಪ್ರತೀಕ್ ಮುಕುಂದ

ಬೆಳೆದದ್ದು ಬೆಂಗಳೂರಿನಲ್ಲಿ. ಎಂಜಿನಿಯರ್ ವೃತ್ತಿಯಲ್ಲಿದ್ದಾರೆ. ಬೆಂಗಳೂರು ಹಾಗೂ ಆಸ್ಟ್ರೇಲಿಯಾದ ಸಿಡ್ನಿಯಲ್ಲಿ ಕೆಲಸ ಮಾಡಿದ್ದಾರೆ. ಛಾಯಾಗ್ರಹಣ, ಸಂಗೀತ, ಸಾಹಿತ್ಯ, ಸಿನಿಮಾ ಹೀಗೆ ವಿವಿಧ ಕ್ಷೇತ್ರಗಳ ಉತ್ಕಟ ವ್ಯಾಮೋಹಿ. 2011 ಮತ್ತು 2013ರ ಹೆಗ್ಗೋಡಿನ ನೀನಾಸಂ ಸಂಸ್ಕೃತಿ ಶಿಬಿರದಲ್ಲಿ ಸ್ವತಂತ್ರ ಛಾಯಾಚಿತ್ರ ಪ್ರದರ್ಶನಗಳನ್ನು ನೀಡಿದ್ದಾರೆ. 2016ರಲ್ಲಿ, ಇವರ ಸಣ್ಣ ಕತೆಗಳು 'toto funds the arts' ಸಂಸ್ಥೆಯು ಪ್ರತಿ ವರ್ಷವೂ ಆಯೋಜಿಸುವ ಸೃಜನಶೀಲ ಬರವಣಿಗೆಯ ಸ್ಪರ್ಧೆಯ ಅಂತಿಮ ಸುತ್ತಿಗೆ ಆಯ್ಕೆಯಾಗಿದ್ದವು. ಕತೆಗಳು ಪತ್ರಿಕೆಗಳಲ್ಲಿ ಪ್ರಕಟವಾಗಿವೆ.